ಸಿಸಿ ಸಂಖ್ಯೆಃ 700/2022
ಪಿಡಬ್ಲ್ಯೂಃ 01
ದಿನಾಂಕಃ 27.02.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಎಸ್ ಕೆ ವಕೀಲರಿಂದಃ

ನನ್ನದು ಪೀವರ್ಸ ಪ್ಯಾಕ್ಟರಿ ಇರುತ್ತದೆ. ನಾನು ಆರೋಪಿಗೆ ನಿಪಿ-1 ಚೆಕ್ಕನ್ನು ಸಹಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಭದ್ರತೆಗಾಗಿ ಕೊಟ್ಟಿರುತ್ತೇನೆ. ಭದ್ರತೆ ಎಲ್ಲಿಯವರೆಗೆ ಇತ್ತು ಎಂದರೆ ಎಲ್ಲಿಯವರೆಗೆ ಅಂತಾ ಇರಲಿಲ್ಲ ಜಿಎಸ್ ಟಿ ಹಾಗೂ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಮ್ಮ ಹೆಸರಿನಲ್ಲಿ ಮಾಡಿಕೊಟ್ಟ ನಂತರ ಹಣ ಕೊಡಬೇಕು ಅಂತಾ ಕರಾರು ಇತ್ತು. ಭದ್ರತೆಗಾಗಿ ಸದರಿ ನಿಪಿ-1 ಚೆಕ್ ಕೊಟ್ಟಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯ ಪಾಲುದಾರಿಕೆಯ ಬಾಬತ್ತು 10 ಲಕ್ಷ ರೂಪಾಯಿಯಲ್ಲಿ 7 ಲಕ್ಷ ರೂಪಾಯಿಗೆ ಚೆಕ್ಕನ್ನು ನೀಡಿದ್ದೆ ಎಂದರೆ ಸರಿ. ಪಾಲುದಾರಿಕೆಯನ್ನು ವಿಮುಕ್ತಿಗೊಳಿಸುವಾಗ ಪಿರಾದಿದಾರರಿಂದ ಕರೆಂಟ್ ಅಕೌಂಟನ ಚೆಕ್ಕಗಳಿಗೆ ಇಬ್ಬರದು ಸಹಿ ಮಾಡಿಕೊಂಡು ನಾನು ನಾಲ್ಕು ಚೆಕ್ಕುಗಳನ್ನು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ನಾಲ್ಕು ಚೆಕ್ಕಗಳನ್ನು ತೆಗೆದುಕೊಂಡು ಕರೆಂಟ್ ಅಕೌಂಟ್ ಮುಕ್ತಾಯ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆತನಿಗೆ ಸಹಿ ಮಾಡಲು ಎಂದೂಾ ಕರದೇ ಇಲ್ಲ ಮತ್ತು ಅವಶ್ಯಕತೆ ಬಿದ್ದಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಆತನ ಸಹಿ ಬೇಕಾಗಿತ್ತು ಅಂತಾ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅಂತಹ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ ಹಾಜರು ಮಾಡುತ್ತೇನೆ. ಪಿರಾದಿದಾರ ಸಹಿ ಮಾಡಲು ಬಂದಿಲ್ಲ ಅಂತಾ ಆತನಿಗೆ ನೋಟಿಸು ಕಳುಹಿಸಿಲ್ಲ ಎಂದರೆ ಸರಿ ಮತ್ತು ಆತನ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ, ಅವರ ಮೇಲೆ ಭರವಸೆ ಇಟ್ಟು ಯಾವುದೇ ಕ್ರಮ ಕೈಗೊಂಡಿಲ್ಲ ಪಾಲುಗಾರಿಕೆಯ ಆತನ ಹಣ ಕೊಡಲು ನಿಪಿ-1 ಚೆಕ್ಕನ್ನು ನೀಡಿದ್ದರೂ ಸಹ ಭದ್ರತೆಗಾಗಿ ನಿಡಿದ್ದು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.